13	Cauvery Basin Lift Irrigation Corpn.	(-) 89.57	(-) 88.67	(-) 72.30
14	Mysore Tobacco Company Ltd.	(-) 35.56	(-) 34.10	(-) 27.88
15	Mysore Match Company Ltd.	(-) 1.21	(-) 1.46	(-) 0.43
16	Mysore Chrome Tanning Company Ltd.	(-) 64.81	(-) 77.32	(-) 84.74
17	N.G.E.F. Ltd.	(-)2089.05	(-) 2549.37	(-) 3820.60
18	Chamundi Machine Tools Ltd.	(-) 37.31	(-) 29.87	(-) 8.89
19	K.I.M.C.O. Ltd.	(-) 286.07	(-) 267.17	(-) 372.19
20	Kar. Milk Products Ltd.	(-) 0.03	(-) 0.03	(-) 0.03
21	Kar. State Textile Ltd.	(-) 96.13	(-) 45.97	(-) 60.48

*Indicates Income (+) / DEFICIT (-)

ರಾಜ್ಯ ಹಣಕಾಸು ಆಯೋಗ

845 - ಶ್ರೀ ಎಸ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರವು ಯಾವಾಗ ಜಾರಿಗೆ ತರುತ್ತದೆ?

ಆ) ಈ ಪ್ರಕಾರ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಮತ್ತು ನಗರಸ್ಥಳೀಯ ಸಂಸ್ಥೆಗಳ ಮಧ್ಯೆ ಯಾವ ಪ್ರಮಾಣದಲ್ಲಿ ಹಣವನ್ನು ಹಂಚಿಕೆ ಮಾಡಲಾಗುವುದು?

ಇ) ಹಾಗಿದ್ದಲ್ಲಿ ಮಂಗಳೂರು ಮಹಾನಗರಪಾಲಿಕೆಯು ಎಷ್ಟು ಹಣವನ್ನು ಪಡೆಯುತ್ತದೆ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :

ಅ) 1-4-97 ರಿಂದ ಜಾರಿಗೆ ತರಲಾಗುವುದು.

ಆ) ರಾಜ್ಯ ಆರ್ಥಿಕ ಆಯೋಗದ ಶಿಫಾರಸ್ಸುಗಳ ಪ್ರಕಾರ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮಧ್ಯೆ 85:15 ರ ಪ್ರಮಾಣದಲ್ಲಿ 2001-2002ರವರಗೆ ಸಾಧಿಸಲಾಗುವುದು. 1997-98, 98-99 ಮತ್ತು 99-2000 ಮತ್ತು 2000-2001 ರಲ್ಲಿ ಈ ಪ್ರಮಾಣವು ಕ್ರಮವಾಗಿ 90:10, 89:11, 87.5:12.5 ಮತ್ತು 86:14 ರಂತಿರುತ್ತದೆ.

ಇ) ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಮಂಗಳೂರು ಮಹಾನಗರ ಪಾಲಿಕೆಯು ಪಡೆಯುವ ಖಚಿತವಾದ ಮೊತ್ತವನ್ನು 1-4-97ರ ನಂತರ ತಿಳಿಯಬಹುದು.

ಸಭೆಯ ಮುಂದಿಡಲಾದ ಕಾಗದಪತ್ರಗಳ ಪಟ್ಟಿ

I ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು) (ಮುಖ್ಯಮಂತ್ರಿಗಳ ಪರವಾಗಿ) :

ಕರ್ನಾಟಕ ರಾಜ್ಯ ಸಿವಿಲ್‌ಸೇವೆಗಳ ಅಧಿನಿಯಮ 1978ರ ಅನುಚ್ಛೇದ 8(3)ರ ಮೇರೆಗೆ;

1) ಕರ್ನಾಟಕ ರಿಕ್ರೂಟ್‌ಮೆಂಟ್ ಆಫ್ ಗೆಜೆಟೆಡ್ ಪ್ರೋಬೇಷನರ್ಸ್ (ಸ್ಪೆಶಲ್ ಪ್ರಾವಿಷನ್ಸ್) ರೂಲ್ಸ್1992ರ ನಿಯಮ 2ಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 28.10.1992ರಂದು ಹೊರಡಿಸಲಾದ ಡಿಪಿಎಆರ್ 89ನೇ ಕ್ರಮಾಂಕದ ಅಧಿಸೂಚನೆ;

2) ಕರ್ನಾಟಕ ಸಿವಿಲ್ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು-'ಎ' ಮತ್ತು ಗುಂಪು-'ಬಿ' ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಗಳು 1985ರ ನಿಯಮ 2 ಮತ್ತು 4ಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ4.3.1993ರಂದು ಹೊರಡಿಸಲಾದ ಡಿಪಿಎಆರ್ 17 ಎಸೇಬಿಸಿ 92ನೇ ಕ್ರಮಾಂಕದ ಅಧಿಸೂಚನೆ ;

3) ಕರ್ನಾಟಕ ಸಿವಿಲ್ ಸೇವೆಗಳು (ಸೇವಾ ಮತ್ತು ಕನ್ನಡ ಪರೀಕ್ಷೆಗಳು) ನಿಯಮಗಳು, 1974ರ ಅನುಬಂಧ1ಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ31.3.1993ರಂದು ಹೊರಡಿಸಲಾದ ಸಿಆಸುಇ 13 ಸೆನೆನಿ 91ನೇ ಕ್ರಮಾಂಕದ ಅಧಿಸೂಚನೆ;

4) ಕರ್ನಾಟಕ ಸಿವಿಲ್ ಸೇವೆಗಳು (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳ) ನಿಯಮಗಳು, 1974ರ ಅನುಬಂಧ 2ಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 6.4.1993ರಂದು ಹೊರಡಿಸಲಾದ ಸಿಆಸುಇ 13 ಸೆನೆನಿ 92ನೇ ಕ್ರಮಾಂಕದ ಅಧಿಸೂಚನೆ;

5) ಕರ್ನಾಟಕ ಸಿವಿಲ್ ಸೇವೆಗಳು (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಅನುಬಂಧ 1ಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 1.9.1993 ರಂದು ಹೊರಡಿಸಲಾದ ಸಿಆಸುಇ 37 ಸೆನೆನಿ 89ನೇ ಕ್ರಮಾಂಕದ ಅಧಿಸುಚನೆ.

6) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 3ರ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 9-2-1994ರಂದು ಹೊರಡಿಸಲಾದ ಡಿಪಿಎಆರ್42 ಎಸ್‌ಆರ್‌ಆರ್93ನೇ ಕ್ರಮಾಂಕದ ಅಧಿಸೂಚನೆ ;